2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**118/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ತಂಗಚ್ಚನ್ | ಪಿಡಬ್ಲ್ಯೂ - 3 |
| ತಂದೆಯ ಹೆಸರು | - | ಪತ್ರೋಸ್ | ಸಿಡಬ್ಲ್ಯೂ - 2 |
| ವಯಸ್ಸು | - | 61 ವರ್ಷ | |
| ಉದ್ಯೋಗ | - | ಕೂಲಿ | |
| ವಾಸ ಸ್ಥಳ | - | ಎನ್.ಆರ್. ಪುರ | |

ದಿನಾಂಕಃ 15-03-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ನನಗೆ ಫ್ರಾಸಾ.1 ಪ್ರಸೀದಾ ಗೊತ್ತು. ಈಗ ತೋರಿಸಿದ ನಿ.ಪಿ.2 ಮಹಜರ್ ಮೇಲ ಈ ಸಾಕ್ಷಿಯ ಸಹಿ ಇದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು. ನಾನು ಸದರಿ ಸಹಿಯನ್ನು ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ಪ್ರಸೀದ್ ರವರ ಮನೆಯಲ್ಲಿ ಮಾಡಿರುತ್ತೇನೆ. ಸದರಿ ಮಹಜರ್ ನ್ನು ಗಲಾಟೆಗೆ ಸಂಬಂಧಿಸಿದಂತೆ ಮಾಡಿರುತ್ತಾರೆ. ಸದರಿ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ.

2. ಆ ಸದರಿ ಸ್ಥಳದಲ್ಲಿ ಪಿರ್ಯಾದಿಯ ಮನೆಯಲ್ಲಿ ಕತ್ತಿ ಬಿದ್ದಿತ್ತು ಮತ್ತು ಮಂಚದ ಕೆಳಗೆ ರಕ್ತದ ಕಲೆ ಹತ್ತಿದ ಬಟ್ಟೆ ಬಿದಿತ್ತು. ಅದನ್ನು ನನ್ನ ಸಮಕ್ಷಮ ತೆಗೆದುಕೊಂಡಿರುತ್ತಾರೆ. ಕತ್ತಿಯನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಕತ್ತಿಯನ್ನು ಅಮಾನತ್ತು ಪಡಿಸಿಕೊಂಡ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದು ನಿ.ಪಿ.2 ಮಹಜರ್ ಆಗಿರುತ್ತದೆ. ಕತ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿದ ಒಂದು ಕತ್ತಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದೇ ಕೃತ್ಯ ನಡೆದ ಸ್ಥಳದಲ್ಲಿ ಬಿದ್ದಿತ್ತು ಎಂದು ಹೇಳಿರುತ್ತಾರೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

3. ಈಗ ತೋರಿಸಿದ ಒಂದು ಪೋಟೋದಲ್ಲಿ ನಾನು, ಪ್ರಸೀದ ಮತ್ತು ಇನ್ನೊಬ್ಬ ಪಾಪಣ್ಣ ಎನ್ನುವವರು ಇರುತ್ತಾರೆ. ಸದರಿ ಪಾಪಣ್ಣ ರವರಿಗೆ ಇನ್ನೊಂದು ಹೆಸರಿದೆ ಆ ಹೆಸರು ನನಗೆ ನೆನಪಿರುವುದಿಲ್ಲ. ಸದರಿ ಪೋಟೋವನ್ನು ಪ್ರಸೀದ್ ರವರ ಮನೆಯ ಮುಂದೆ ತೆಗೆದಿರುತ್ತಾರೆ. ಅದನ್ನು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದೆ.

4. ನಾನು ಕಳೆದ 5 ವರ್ಷಗಳಿಂದ ಪ್ರಸೀದ್ ರವರ ಹತ್ತಿರ ರಬ್ಬರ್ ಟ್ಯಾಪಿಂಗ್ ಮಾಡುತ್ತೇನೆ ಮತ್ತು ಕೃಷಿ ಚಟುವಟಿಕೆಯನ್ನು ಮಾಡುತ್ತೇನೆ. ಸದರಿ ನಿ.ಪಿ.2 ಮಹಜರ್ ನ್ನು ಅಕ್ಟೋಬರ್ 2015 ರಲ್ಲಿ ಮಾಡಲಾಗಿರುತ್ತದೆ. ಸದರಿ ನಿ.ಪಿ.2 ಮಹಜರ್ ನ್ನು ಮದ್ಯಾಹ್ನ

ಮಾಡಿರುತ್ತಾರೆ. ಪ್ರಸೀದ್ ರವರು ತಮ್ಮದೇ ಜಾಗದಲ್ಲಿ ಶುಂಟಿ, ಬಾಳೆ ಇವುಗಳ ಕೃಷಿ ಮಾಡುತ್ತಿದ್ದರು ಮತ್ತು ರಬ್ಬರ್ ನರ್ಸರಿ ಸಹ ಮಾಡುತ್ತಿದ್ದರು. ನಾನು ಬೆಳಿಗ್ಗೆ 4.00 ಗಂಟೆಗೆ ರಬ್ಬರ್ ಟ್ಯಾಪಿಂಗ್ ಹೋದರೆ ಕೆಲಸ ಮುಗಿಸಿ ಬರುವುದು ಸಂಜೆ 5.00 ಗಂಟೆಯಾಗುತ್ತದೆ. ಸದರಿ ಘಟನೆಯು ಅಕ್ಟೋಬರ್ 2015 ರಲ್ಲಿ ನಡೆದಿರುತ್ತದೆ. ದಿನಾಂಕ 28 ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಆ ದಿನವು ಸಹ ನಾನು ಬೆಳಿಗ್ಗೆ 4.00 ಗಂಟೆಗೆ ಕೆಲಸಕ್ಕೆ ಹೋಗಿರುತ್ತೇನೆ. ಆ ದಿನ ಮನೆಯಲ್ಲಿ ಪ್ರಸೀದ್ ಒಬ್ಬರೇ ಇದ್ದರು. ಘಟನೆಯ ವಿಷಯವಾಗಿ ನನಗೆ ವಿಲ್ಸ್ ನ್ ಎನ್ನುವವರು ನನಗೆ ರಾತ್ರಿ 10.30 ರಿಂದ 11.00 ಗಂಟೆ ಸುವಯದಲ್ಲಿ ನನಗೆ ಫೋನ್ ಮಾಡಿ ಪ್ರಸೀದ್ ರವರನ್ನು ಯಾರೋ ಹೊಡೆದು ರಕ್ತ ಗಾಯ ಮಾಡಿದ್ದಾರೆಂದು ತಿಳಿಸಿರುತ್ತಾರೆ. ನಾನು ಹೋಗುವಷ್ಟರಲ್ಲಿ ಪ್ರಸೀದ್ ರವರು ವಿಲ್ಸ್ ನ್ ರವರ ಮನೆಯ ಹತ್ತಿರ ನಡೆದುಕೊಂಡು ಬಂದಿದ್ದರು. ಆ ಸಮಯದಲ್ಲಿ ವಿಜು ಎನ್ನುವವರು ಬಂದಿದ್ದು, ಅವರ ಕಾರಿನಲ್ಲಿ ನಾನು, ವಿಜು, ವಿಲ್ಸ್ ನ್ ಇವರುಗಳು ಪ್ರಸೀದ್ ನನ್ನು ಕರೆದುಕೊಂಡು ಎನ್.ಆರ್. ಪುರ ಪೊಲೀಸ್ ಠಾಣೆಗೆ ಹೋದೆವು. ಅಲ್ಲಿ ಪೊಲೀಸರು ಆಸ್ಪತ್ರೆಗೆ ಹೋಗಲು ಹೇಳಿದ್ದರಿಂದ ಎನ್.ಆರ್. ಪುರ ಆಸ್ಪತ್ರೆಗೆ ಚಿಕಿತ್ಸೆಗಾಗಿ ಪ್ರಸೀದ್ ರವರನ್ನು ಕರೆದುಕೊಂಡು ಹೋದೆವು.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗ್ಗಿನ ಅವಧಿ ಮುಗಿದಿದ್ದರಿಂದ ಮುಂದು ವರೆದ ಮುಖ್ಯ ವಿಚಾರಣೆಯನ್ನು ಮದ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು)

ದಿನಾಂಕಃ 15-03-2019 ರಂದು ಸಾಕ್ಷಿಗೆ ಪುನಃ ಕರೆಸಿ ಮದ್ಯಾಹ್ನ 3.00 ಗಂಟೆಗೆ ಪ್ರಮಾಣ ವಚನ ಬೋಧಿಸಲಾಯಿತು.

5. ನಾನು ಪ್ರಸೀದ್ ರವರನ್ನು ಯಾಕೆ ಹೀಗಾಯಿತು ಎಂದು ಕೇಳಿದಾಗ ಅವರು ತಮ್ಮ ಮನೆಗೆ ಇಬ್ಬರು ವ್ಯಕ್ತಿಗಳು ಬಂದು ರಬ್ಬರ್ ಸಸಿ ಬೇಕೆಂದು ಬೆಲೆಯನ್ನು ಕೇಳಿ ನೀರು ಕೇಳಿದರು. ನಂತರ ಪ್ರಸೀದ್ ರವರು ಒಂದು ಸಸಿ ಗೆ 50 ರೂ. ಎಂದು ಹೇಳಿದರು. ನಂತರ ಕುರಿಯಲು ನೀರು ಕೇಳಿರುತ್ತಾರೆ. ಪ್ರಸೀದ್ ರವರು ನೀರು ತರಲು ಒಳಗೆ ಹೋದಾಗ ಇಬ್ಬರು ವ್ಯಕ್ತಿಗಳು ಅವರ ಹಿಂದೆ ಹೋಗಿ ಕತ್ತಿಯಿಂದ ಪ್ರಸೀದ್ ರವರ ತಲೆಗೆ ಹೊಡೆಯಲು ಹೋದಾಗ ಅವರು ತಮ್ಮ ಕೈಯನ್ನು ಅಡ್ಡ ಮಾಡಿದಾಗ ಕೈಗೆ ಮತ್ತು ತಲೆಗೆ ರಕ್ತಗಾಯವಾಯಿತು. ಮತ್ತು ಸದರಿ ಇಬ್ಬರು ವ್ಯಕ್ತಿಗಳು ನನಗೆ ಮುಷ್ಟಿಯಿಂದ ಹೊಡೆದರು ಆಗ ನಾನು ಹೊರಗೆ ಓಡಿ ಬಂದೆನು ಎಂದು ಪ್ರಸೀದ್ ರವರು ನನಗೆ ತಿಳಿಸಿದರು. ಸದರಿ ವ್ಯಕ್ತಿಗಳು ಪ್ರಸೀದ್ ರವರನ್ನು ಏನು ಮಾಡಲು ಬಂದಿದ್ದರು ಎಂದು ಹೇಳಲಿಲ್ಲ.

6. ಸದರಿ ವ್ಯಕ್ತಿಗಳು ಪ್ರಸೀದ್ ರವರ ಮನೆಯಿಂದ ಟಿ.ವಿ., ಕಂಪ್ಯೂಟರ್, ಒವನ್, ಇಂಡಕ್ಷನ್ ಸ್ಟವ್ ಮತ್ತು ಇತ್ಯಾದಿಗಳನ್ನು ತೆಗೆದುಕೊಂಡು ಹೋಗಿರುವ ಬಗ್ಗೆ ನನಗೆ ಪ್ರಸೀದ್ ರವರು ತಿಳಿಸಿರುತ್ತಾರೆ. ಈ ಕುರಿತಂತೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಂತರ ಪುನಃ ಪೊಲೀಸರು ನನ್ನನ್ನು ಕರೆಯಿಸಿ ಮೇಲೆ ಹೇಳಿದ ವಸ್ತುಗಳನ್ನು ಮತ್ತು ಅವುಗಳನ್ನು ತೆಗೆದುಕೊಂಡು

ಹೋದ ವ್ಯಕ್ತಿಗಳ ಬಗ್ಗೆಯಾಗಲಿ ಅಥವಾ ಪ್ರಸೀದ್ ರವರ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ತೋರಿಸಿ ನನ್ನ ಯಾವುದೇ ಮರು ಹೇಳಿಕೆಯನ್ನು ಮಾಡಿಕೊಂಡಿಲ್ಲ. ನನಗೆ ಪೊಲೀಸರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ತೋರಿಸಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳೇ ಸದರಿ ಪ್ರಸೀದ್ ರವರ ಮನೆಯಲ್ಲಿ ದರೋಡೆಯನ್ನು ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಕುರಿತಂತೆ ನಾನು ಮರು ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದಃ-</u>

7. ಈಗ ಓದಿ ತೋರಿಸಿದಂತೆ ದಿಃ 17.11.2015 ರಂದು ನಾನು ಘಟನೆಯ ಕುರಿತು ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಮರು ಹೇಳಿಕೆಯಲ್ಲಿ "ದಿಃ 02.11.2015 ರಂದು ................................................................ ದಾವಣಗೆರೆ ಜಿಲ್ಲೆ ಎಂದು ತಿಳಿಯಿತು". ಸದರಿ ಮರು ಹೇಳಿಕೆಯ ಭಾಗವನ್ನು ನಿ.ಪಿ.16 ಎಂದು ಗುರುತಿಸಲಾಯಿತು. ನನಗೆ ಈಗ ನ್ಯಾಯಾಲಯದ ಮುಂದಿರುವ 1 ರಿಂದ 6 ಆರೋಪಿತರೇ ಪ್ರಸೀದ್ ರವರ ಮೆನೆಗೆ ಹೋಗಿ ದರೋಡೆ ಮಾಡಿ ಅವರ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳೇ

ಆಗಿರುತ್ತಾರೆ ಎನ್ನುವ ವಿಷಯ ಗೊತ್ತಿರುತ್ತದೆ. ಹಾಗೂ ಈ ಕುರಿತು ನಿ.ಪಿ.16 ರಂತೆ ಮರು ಹೇಳಿಕೆ ನೀಡಿದ್ದರು ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಹೆಚ್.ಎ.ಟಿ. ವಕೀಲರಿಂದ – 1 ರಿಂದ 5 ನೇ ಆರೋಪಿತರ ಪರವಾಗಿ</u>

8. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಆದ್ದರಿಂದ ಮಹಜರ್ ನಲ್ಲಿ ನನಗೆ ಏನು ಬರೆದಿದ್ದರು ಎಂದು ಗೊತ್ತಿಲ್ಲ ಆದರೇ ಬೆರೆಯವರು ಓದಿ ಹೇಳಿದ್ದರಿಂದ ನನಗೆ ಗೊತ್ತಿರುತ್ತದೆ. ನಾನು ನಿ.ಪಿ.2 ಮಹಜರ್ ಗೆ ಸಹಿ ಮಾಡಿದಾಗ ಮದ್ಯಾಹ್ನ 2.30 ರಿಂದ 3.00 ಗಂಟೆ ಸಮಯವಾಗಿತ್ತು. ಆ ಸಮಯದಲ್ಲಿ ನನ್ನ ಜೊತೆ ಪಾಪಣ್ಣ ಎಂಬುವವರು ಸದರಿ ಮಹಜರ್ ಗೆ ಸಹಿ ಮಾಡಿರಬಹುದು. ಈಗ ತೋರಿಸಿದ ಮು.ಮಾ.1 ಕತ್ತಿ ಪ್ರಸೀದ್ ರವರ ಮನೆಯದ್ದೇ ಎಂದರೆ ಸರಿ. ಪೊಲೀಸರು ಈ ತರಹ ನಿಲ್ಲಿ ಎಂದು ನಮ್ಮನ್ನು ನಿಲ್ಲಿಸಿಕೊಂಡು ಪೋಟೋ ತೆಗೆದಿರುತ್ತಾರೆ ಎಂದರೆ ಸರಿ. ನಮ್ಮ ಮನೆಗೂ ಪ್ರಸೀದ್ ರವರ ಮನೆಗೂ ಸುಮಾರು 300 ಮೀಟರ್ ದೂರ ಇರುತ್ತದೆ. ವಿಲ್ಸ್‌ನ್ ರವರು ನನಗೆ ಪೋನ್ ಮಾಡಿ ಪ್ರಸೀದ್ ರವರಿಗೆ ಯಾರೋ ಹೊಡೆದಿದ್ದಾರೆಂದು ತಿಳಿಸಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರಸೀದ್ ರವರನ್ನು ನಾನು ಎನ್.ಆರ್. ಪುರ ಪೊಲೀಸ್

ಠಾಣೆಗೆ ಮತ್ತು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – 6 ನೇ ಆರೋಪಿತರ ಪರವಾಗಿ

9. 1 ನೇ ಆರೋಪಿತರ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾಃ